# * ಬ್ರಾಹ್ಮಸಮಾಜದ ಮೇಲೆ ಶ್ರೀರಾಮಕೃಷ್ಣರ ಪ್ರಭಾವ *

ಕು.ಸ್ವರ್ಣಗೌರಿ

೧೯ನೇ ಶತಮಾನದ ಉತ್ತರಾರ್ಧದಲ್ಲಿ ಕೊಲ್ಕತಾದ ಅನೇಕ ವಿದ್ಯಾವಂತರನ್ನು ಆಕರ್ಷಿಸಿದ್ದ ಬ್ರಾಹ್ಮಸಮಾಜದ ಕೆಲವು ಧುರೀಣರು ಶ್ರೀರಾಮಕೃಷ್ಣರಿಂದ ಹೇಗೆ ಪ್ರಭಾವಿತರಾದರು ಎಂಬುದರ ಒಂದು ಸೂಕ್ಷ್ಮ ಪರಿಚಯವನ್ನು ನೀಡಿರುವ ಮೈಸೂರು ನಿವಾಸಿಗಳಾದ ಕು. ಸ್ವರ್ಣಗೌರಿ ಅವರು ಆಶ್ರಮದ ಭಕ್ತರು.

೧೯ನೇ ಶತಮಾನದ ಉತ್ತರಾರ್ಧದಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾದ ಭಾರತೀಯರಲ್ಲಿ ಶ್ರೀರಾಮ ಕೃಷ್ಣರ ಜೀವನ, ಸಂದೇಶ ಉಪದೇಶಗಳಿಂದ ಪ್ರಪ್ರಥಮವಾಗಿ ಪ್ರಭಾವಿತರಾದವರು ಬ್ರಾಹ್ಮಸಮಾಜಿಗಳು. ಆಗ ತಾನೇ ಆರಂಭ ಗೊಂಡಿದ್ದ ಬ್ರಾಹ್ಮಸಮಾಜ ತನ್ನೊಳಗಿನ ಭಿನ್ನಾಭಿಪ್ರಾಯ ಗಳಿಂದಾಗಿ ಅನೇಕ ಹೋಳುಗಳಾಗಿದ್ದರೂ ರಾಮಕೃಷ್ಣ ಮಠ ಹಾಗೂ ಮಿಷನ್ನಿನ ಆಧಾರಸ್ತಂಭಗಳೆನಿಸಿದ್ದ ಸ್ವಾಮಿ ವಿವೇಕಾ ನಂದ, ಶಾರದಾನಂದ, ಬ್ರಹ್ಮಾನಂದ ಮುಂತಾದವರೆಲ್ಲರೂ ತಮ್ಮ ವಿದ್ಯಾರ್ಥಿದೆಸೆಯಲ್ಲಿ ಬ್ರಾಹ್ಮಸಮಾಜದ ಒಂದಲ್ಲ ಒಂದು ಪಂಗಡದಿಂದ ಪ್ರಭಾವಿತರಾಗಿದ್ದರು. ಸ್ವತಃ ಶ್ರೀರಾಮಕೃಷ್ಣರೇ ಕೀರ್ತನೆಯ ಮುಕ್ತಾಯದ ನಂತರ "ಆಧುನಿಕ ಯುಗದ ಬ್ರಹ್ಮಜ್ಞಾನಿಗಳಿಗೂ ನನ್ನ ನಮಸ್ಕಾರ" ಎನ್ನುತ್ತಾ ಅಂದಿನ ಕೆಲವು ಬ್ರಾಹ್ಮಸಮಾಜಿಗಳ ಮೇಲೆ ತಮಗಿದ್ದ ಗೌರವವನ್ನು ಸೂಚಿಸು ತ್ತಿದ್ದರು.

ವಂಗದೇಶದ ಜನತೆಗೆ ಶ್ರೀರಾಮಕೃಷ್ಣರ ಜೀವನ, ಸಂದೇಶ, ಉಪದೇಶ, ಮಹಿಮೆಗಳ ಪರಿಚಯ ಮೊದಮೊದಲು ಆದುದು ಬ್ರಾಹ್ಮಸಮಾಜದ ಕೆಲವು ಧುರೀಣರಿಂದ ಎಂಬುದು ಗಮನಾರ್ಹವಾದ ಸಂಗತಿ. ಆಂಗ್ಲಭಾಷೆಯಲ್ಲಿ ಅವರ ಜೀವನ ವನ್ನು ಪ್ರಕಟಿಸಿ ಪಾಶ್ಚಾತ್ಯ ದಾರ್ಶನಿಕರ ಜೀವನರಂಗದಲ್ಲಿ ಮೊದಲ ಬಾರಿಗೆ ಶ್ರೀರಾಮಕೃಷ್ಣರ ಪ್ರವೇಶವಾಗಲು ಭೂಮಿಕೆ ಯನ್ನು ಸಿದ್ಧಪಡಿಸುವುದರಲ್ಲೂ ಕೇಶವಚಂದ್ರ ಸೇನನಂತಹ ಬ್ರಾಹ್ಮಸಮಾಜಿಗಳ ಪಾತ್ರ ಇದೆ.

**ಬ್ರಾಹ್ಮಸಮಾಜದ ಜನನ:** ಇಂಗ್ಲಿಷರು ಭರತಖಂಡವನ್ನು ಜಯಿಸಲು ಉಪಕ್ರಮಿಸಿದಾಗ ದೇಶದ ಪರಿಸ್ಥಿತಿ ಶೋಚನೀಯ ವಾಗಿತ್ತು. ಜನರು ವೇದೋಪನಿಷತ್ತುಗಳ **ಏಕಮೇವಾದ್ವಿತೀಯಂ ಬ್ರಹ್ಮ**—ಎರಡಿಲ್ಲದ ಒಂದೇ ಸತ್ಯವೇ ಬ್ರಹ್ಮ, **ಏಕಂ ಸತ್ ವಿಪ್ರಾ ಬಹುಧಾ ವದಂತಿ**—ಒಂದೇ ಸತ್ಯವನ್ನು ತಿಳಿದವರು ಹಲವು ರೀತಿಯಲ್ಲಿ ಹೇಳುವರು; ಎಂಬುದನ್ನೆಲ್ಲ ಮರೆತು ಪಾಶ್ಚಾತ್ಯ ಸಂಸ್ಕೃತಿಯ ಥಳಕನ್ನು ಕಂಡು ಮೋಹಿತರಾಗಿದ್ದರು. ಆಂಗ್ಲರ ಪ್ರಭಾವ ಮೊದಲು ಹಬ್ಬಿದುದು ಬ್ರಿಟಿಷರ ರಾಜಧಾನಿಯಾಗಿದ್ದ ಕೊಲ್ಕತಾದಲ್ಲಿ. ಇಂತಹ ದಾರುಣ ಪರಿಸ್ಥಿತಿಯಲ್ಲಿ ಪ್ರಚಂಡ ಸುಧಾರಣೆಯ ಕಾರ್ಯಕ್ಕೆ ಕೈಹಾಕಿದ ಮಹಾನ್ ವ್ಯಕ್ತಿ ರಾಜಾ ರಾಮ ಮೋಹನರಾಯ್ ಕ್ರಿ.ಶ. ೧೮೨೮ರಲ್ಲಿ ಬ್ರಾಹ್ಮ ಸಮಾಜ ವನ್ನು ಸ್ಥಾಪನೆ ಮಾಡಿದರು. ಇವರ ಮರಣಾನಂತರ, ಮಹರ್ಷಿ ದೇವೇಂದ್ರನಾಥ ಠಾಕೂರರು ಆ ಸಮಾಜದ ಅಧ್ಯಕ್ಷ ರಾದರು. ಇದೇ ಸಮಯದಲ್ಲಿ ಕ್ರಿ.ಶ.೧೮೬೨ರಲ್ಲಿ ಕೇಶವಚಂದ್ರ ಸೇನನೆಂಬ ಇಪ್ಪತ್ತುಮೂರು ವರ್ಷದ ಯುವಕ ಅವರಿಗೆ ಸಹ ಕಾರಿಯಾಗಿ ಬಂದನು. ಸ್ಫುರದ್ರೂಪಿಯೂ, ಮೇಧಾವಿಯೂ, ಮಹಾ ಪ್ರತಿಭಾವಂತನೂ ಆದ ಕೇಶವನು ಬಹು ಬೇಗನೆ ಮಹರ್ಷಿಗಳಿಗೆ ಅಚ್ಚುಮೆಚ್ಚಾದನು. ಆದರೆ ಕೇಶವನು ಕ್ರೈಸ್ತ ಮತ ಪಕ್ಷಪಾತಿಯಾಗಿದ್ದ ಕಾರಣ ಇವರಿಬ್ಬರ ನಡುವೆ ಕಲಹ ವುಂಟಾಗಿ ಬ್ರಾಹ್ಮಸಮಾಜದಲ್ಲಿ ಬಿರುಕುಬಿಟ್ಟಿತು. ಕೇಶವನು ಮಹರ್ಷಿಯ ಮೂಲಬ್ರಹ್ಮಸಮಾಜವನ್ನು ತೊರೆದು ತನ್ನದೇ ಆದ 'ನವವಿಧಾನ' ವನ್ನು (ಭಾರತೀಯ ಬ್ರಾಹ್ಮಸಮಾಜ) ಪ್ರಾರಂಭಿಸಿದನು.

ಕೇಶವನು ತನ್ನ ವಿದ್ವತ್ತು, ಪಾಂಡಿತ್ಯ, ಭಾವಪೂರ್ಣ ಉಪನ್ಯಾಸಗಳಿಂದ ಅಪಾರವಾದ ಯಶಸ್ಸನ್ನು ಗಳಿಸಿದನು. ಆತನ ಕೀರ್ತಿಪತಾಕೆಯು ಎಲ್ಲೆಡೆಯೂ ಹಬ್ಬಿತು. ಆತನ ಸಮಾಜದ ಪ್ರಭಾವ ಕೇವಲ ವಂಗದೇಶದಲ್ಲಿ ಮಾತ್ರವಲ್ಲದೆ ಪಂಜಾಬ, ಮದರಾಸು ಮುಂತಾದ ಪ್ರದೇಶಗಳಿಗೂ ಹಬ್ಬಿ ಕ್ರಿ.ಶ.೧೮೬೫ ರೊಳಗೆ ಸಮಾಜದ ೫೪ ಶಾಖೆಗಳು ಆರಂಭಗೊಂಡುವು. ಸದಸ್ಯರ ಸಂಖ್ಯೆ ದಿನೇ ದಿನೇ ವೃದ್ಧಿಯಾಗತೊಡಗಿತು. ಆತನ ನೇತೃತ್ವದಲ್ಲಿ ಪ್ರಾರಂಭಗೊಂಡ ಅನೇಕ ಸುಧಾರಣೆಗಳಿಂದ ಭರತ ವರ್ಷದ ಸಾಮಾಜಿಕ ಮತ್ತು ಧಾರ್ಮಿಕ ಜೀವನಕ್ಕೆ ಹೊಸ ತಿರುವು ದೊರೆತಂತಾಯಿತು.

**ಬ್ರಾಹ್ಮಸಮಾಜದ ನಿಯಮಗಳು:** ಮಾತು, ಮನಸ್ಸುಗಳಿಗೆ ನಿಲುಕದ ಬ್ರಹ್ಮತತ್ತ್ವದ ಉಪಾಸನೆಯೊಂದಲ್ಲದೆ ಬೇರೆ ಯಾವುದಕ್ಕೂ ಇಲ್ಲಿ ಅವಕಾಶವಿರಲಿಲ್ಲ. ಯಾವ ಮತದ, ಯಾವ ದೇವರ, ಯಾವ ಧಾರ್ಮಿಕ ಆಚರಣೆಗಳಿಗೂ ಎಡೆ ಯಿರಲಿಲ್ಲ. ಮೂರ್ತಿಪೂಜೆ ಸಂಪೂರ್ಣವಾಗಿ ನಿಷಿದ್ಧವಾಗಿತ್ತು. ಜಾತಿ, ಮತ, ಜನಾಂಗ, ವರ್ಣಗಳ ಭೇದವಿಲ್ಲದೆ ಎಲ್ಲರಿಗೂ ಅಲ್ಲಿ ಮುಕ್ತ ಆಹ್ವಾನವಿತ್ತು. ಅನ್ಯ ಮತದ ದ್ವೇಷ, ನಿಂದೆಗಳಿಗೆ ಆಸ್ಪದವಿರಲಿಲ್ಲ. ಸಾಮೂಹಿಕ ಧ್ಯಾನ, ಪ್ರಾರ್ಥನೆಗಳಿಗೆ ಪ್ರಾಶಸ್ತ್ಯ ನೀಡುತ್ತಿದ್ದರು.

**ಸಾಕಾರ, ನಿರಾಕಾರಗಳ ಸಮಾಗಮ:** ಬ್ರಾಹ್ಮಸಮಾಜವು ನಿರಾ ಕಾರದ ದ್ಯೋತಕವಾಗಿದ್ದರೆ, ಪರಮಹಂಸರು ಕಾಳಿಯ ಆರಾಧಕ ರಾಗಿದ್ದರು. ಬ್ರಾಹ್ಮಸಮಾಜದ ಅಧ್ಯಕ್ಷನಾದ ಕೇಶವಚಂದ್ರ ಸೇನ ಹಾಗೂ ಪರಮಹಂಸರ ಸಮಾಗಮವು ಆಧ್ಯಾತ್ಮಿಕ ಪ್ರಪಂಚಕ್ಕೆ

ಹೆಚ್ಚಿನ ಶ್ರೇಯಸ್ಸನ್ನು ತಂದಿತು. ಪರಮಹಂಸರ ಪ್ರಭಾವದಿಂದ ಕೇಶವನು ಭಕ್ತಿಪೂರ್ಣ ಪ್ರಾರ್ಥನೆ ಹಾಗೂ ಕೀರ್ತನೆಗಳನ್ನು ಸಮಾಜದಲ್ಲಿ ಅಳವಡಿಸಿದ.

ಬಾಲ್ಯವಿವಾಹವನ್ನು ವಿರೋಧಿಸುತ್ತಿದ್ದ ಕೇಶವನೇ ತನ್ನ ೧೪ ವರುಷದ ಮಗಳ ವಿವಾಹವನ್ನು ಮಾಡಿದಾಗ, ಬ್ರಾಹ್ಮ ಸಮಾಜವು ಮತ್ತೊಮ್ಮೆ ಹೋಳಾಯಿತು. ಕೇಶವನು ಅಪ ಕೀರ್ತಿಗೂ, ಅಪಹಾಸ್ಯಕ್ಕೂ ಗುರಿಯಾದನು. ಜನರು ದೂರಿದರು. ಕೇಶವನಿಗೆ ಸುತ್ತಲೂ ಕತ್ತಲು ಕವಿದಂತಾಗಿ, ಹಗಲಿರುಳೂ ಬೆಳಕಿಗಾಗಿ ಪ್ರಾರ್ಥನೆ ಮಾಡತೊಡಗಿದನು. ಇದೇ ಸಮಯದಲ್ಲಿ ಅನಿರೀಕ್ಷಿತವಾಗಿ ದಕ್ಷಿಣೇಶ್ವರದ ಮಹಾ ಮಹಿಮರೇ ಇವನ ಬಳಿಗೆ ಬಂದುದು ಅವರ ಅಸಾಧಾರಣ ಕೃಪೆಗೆ ನಿದರ್ಶನವೆನ್ನಬಹುದು. ೧೮೭೫ರಲ್ಲಿ ಘಟಿಸಿದ ಈ ಪ್ರಥಮ ದರ್ಶನವು ಅನೇಕಾನೇಕ ಸ್ನೇಹಪೂರ್ಣ ಸಂದರ್ಶನಗಳಿಗೆ ಪೀಠಿಕೆಯಾಯಿತು. ರಾಮಕೃಷ್ಣರ ಒಡನಾಟದಿಂದ ಕೇಶವನ ಜೀವನವೇ ಬದಲಾಗಿಹೋಯಿತು. ಬ್ರಿಟಿಷ್ ಸಾಮ್ರಾಜ್ಞಿಯಾದ ರಾಣಿ ವಿಕ್ಟೋರಿಯಾ ಹಾಗೂ ಅನೇಕ ಬ್ರಿಟಿಷರ ಗೌರವಕ್ಕೆ ಪಾತ್ರನಾಗಿ 'ಸರ್' ಎಂಬ ಬಿರುದು ಪಡೆದು, ಬ್ರಾಹ್ಮಸಮಾಜದ ಸಾವಿರಾರು ಮಂದಿಗೆ ಆಚಾರ್ಯನಾಗಿದ್ದ ಕೇಶವನು, ದಕ್ಷಿಣೇಶ್ವರದ ದೇವಮಾನವನ ಪದತಲದಲ್ಲಿ ಗಂಟೆಗಟ್ಟಲೆ ಮುಗ್ಧ ಬಾಲಕನಂತೆ ಕುಳಿತು, ಅಮೃತೋಪಮವಾದ ಅವರ ನುಡಿಮುತ್ತುಗಳಿಗಾಗಿ ಕಾಯುತ್ತಿದ್ದನು. ಆತನ ನಿಷ್ಠುರವಾದ ಅಭಿಪ್ರಾಯಗಳು ಸೌಮ್ಯವಾದವು. ಮೂರ್ತಿಪೂಜೆಯನ್ನು ಖಂಡಿಸುತ್ತಿದ್ದ ಆತನು ತಾಯಿ ಭಗವತಿಯ ಆರಾಧಕನಾದನು. ತಾನು ಕಂಡುಕೊಂಡ ಭಕ್ತಿ, ಅನುರಾಗಗಳನ್ನು ಬ್ರಾಹ್ಮಸಮಾಜಕ್ಕೂ ಒಯ್ದನು.

ಕ್ರಿ.ಶ. ೧೮೭೮ರಲ್ಲಿ ಶ್ರೀರಾಮಕೃಷ್ಣರ ಉಪದೇಶಗಳು ಬಂಗಾಳಿ ಭಾಷೆಯಲ್ಲಿ 'ಪರಮಹಂಸೇರ್ ಉಕ್ತಿ' ಎಂಬ ಕಿರು ಹೊತ್ತಗೆಯಲ್ಲಿ ಪ್ರಕಟವಾಯಿತು. ಇದನ್ನು ಕೇಶವನೇ ಸಂಕಲಿಸಿದ್ದನು. ಶ್ರೀರಾಮಕೃಷ್ಣರನ್ನು ವಂಗದೇಶದ ಜನತೆಗೆ ಪರಿಚಯಿಸಿದ ಮೊದಲ ಪುಸ್ತಕವಿದು. ಶ್ರೀರಾಮಕೃಷ್ಣರ ಮಹಿಮೆಯನ್ನು ಪ್ರಾರ್ಥನಾಮಂದಿರಗಳಲ್ಲಿ, ಉಪನ್ಯಾಸಗಳಲ್ಲಿ, ಉಪಾಸನೆಗಳಲ್ಲಿ, ಉಪದೇಶಗಳಲ್ಲಿ, ಪತ್ರಿಕಾ ಲೇಖನಗಳಲ್ಲಿ ಹಾಗೂ ಸಂಭಾಷಣೆಗಳಲ್ಲಿ ಭಾವಪೂರ್ವಕವಾಗಿ ತಿಳಿಸಿದನು. ಬ್ರಾಹ್ಮ ಸಮಾಜದ ಅಧೀನದಲ್ಲಿದ್ದ *Indian Mirror, Sunday Mirror, New Dispensation, Dharmatattwa, Sulabh Samachar, Paricharika* ಮುಂತಾದ ಪತ್ರಿಕೆಗಳು ಶ್ರೀರಾಮಕೃಷ್ಣರ ಭಕ್ತಿ, ಪ್ರೇಮ, ಉಪದೇಶ, ಜೀವನ, ಪವಿತ್ರತೆ, ಮಹಿಮೆಗಳನ್ನು ಸಾರತೊಡಗಿದವು.

ಕೀರ್ತಿಯ ಉನ್ನತ ಶಿಖರದಲ್ಲಿದ್ದ ಕೇಶವನು ತನ್ನ ಯಶಸ್ಸನ್ನೇ ಒತ್ತೆಯಿಟ್ಟು ಪರಮಹಂಸರ ಬಗ್ಗೆ ಎಲ್ಲೆಡೆಯೂ ಸಾರತೊಡಗಿದನು. ಅವನು ಬ್ರಾಹ್ಮಸಮಾಜದ ಉತ್ಸವಗಳಿಗೆ ಪರಮಹಂಸರನ್ನು ಆಹ್ವಾನಿಸುತ್ತಿದ್ದನು. ಸ್ವಲ್ಪ ಬಿಡುವು ದೊರೆತರೆ ಸಾಕು, ತನ್ನ ಅನುಯಾಯಿಗಳೊಡನೆ ದಕ್ಷಿಣೇಶ್ವರಕ್ಕೆ ಧಾವಿಸುವತ್ತಿದ್ದನು. ಶ್ರೀರಾಮಕೃಷ್ಣರು ಬ್ರಾಹ್ಮಸಮಾಜಕ್ಕೆ ಭೇಟಿಯಿತ್ತಾಗ, ಕೇಶವನು ವೇದಿಕೆಯ ಮೇಲೆ ಕುಳಿತು ಪ್ರಾರ್ಥನೆಯಲ್ಲೋ, ಉಪನ್ಯಾಸದಲ್ಲೋ ತೊಡಗಿದ್ದರೆ, ಅರ್ಧಕ್ಕೆ ಮುಗಿಸಿ ಕೆಳಗಿಳಿದು ಬಂದು ಅವರ ಪದತಲದಲ್ಲಿ ಗಂಟೆಗಟ್ಟಲೆ ಕುಳಿತುಕೊಂಡು ಬಿಡುತ್ತಿದ್ದನು! ಇವರ ಬಾಂಧವ್ಯದ ಪ್ರಭಾವದಿಂದ ಕೇಶವನ ತಾಯಿ ಶಾರದಾಸುಂದರಿ ದೇವಿಯೂ ಕೂಡ ಶ್ರೀರಾಮಕೃಷ್ಣರ ಪರಮಭಕ್ತೆಯಾದಳು. ಈಕೆ ಪರಮಹಂಸರಿಗೆ ಅದೆಷ್ಟು ಆತ್ಮೀಯರಾದರೆಂದರೆ ಒಮ್ಮೆ ಅವರು, "ಇಂತಹ ಮಗನನ್ನು ಪಡೆದ ಆ ತಾಯಿಯೇ ಧನ್ಯ! ಮುಂದೆ ಕೇಶವನ ಸಹವಾಸಕ್ಕಾಗಿ ಬಹಳಷ್ಟು ಮಂದಿ ಹಾತೊರೆಯುವುದನ್ನು ಕಾಣುವಿರಿ" ಎನ್ನುತ್ತಾರೆ!

ರಾಮಕೃಷ್ಣರ ಪ್ರಭಾವದಿಂದ ಕೇಶವನಲ್ಲಿ ತೀವ್ರ ಆಧ್ಯಾತ್ಮಿಕ ಅಭೀಪ್ಸೆ ಮೂಡಿ, ಕಠೋರ ಸಾಧನೆಯಲ್ಲಿ ತೊಡಗಿದನು. ಕಾಷಾಯ ವಸ್ತ್ರ ಧರಿಸುವುದು, ಮುಂಡನ ಮಾಡಿಸಿಕೊಳ್ಳುವುದು, ಅರ್ಘ್ಯ ನೀಡುವುದು, ಪವಿತ್ರ ನದಿ ಸ್ನಾನ, ತನ್ನ ಅಡುಗೆಯನ್ನು ತಾನೇ ಮಾಡಿಕೊಳ್ಳುವುದು—ಇವೆಲ್ಲವೂ ಆಧ್ಯಾತ್ಮಿಕ ಪಥದಲ್ಲಿ ತ್ವರಿತವಾಗಿ ಮುಂದುವರಿಯಲು ಸಾಧನಗಳೆಂದು ಅರಿತು, ಹೆಚ್ಚು ಕಡಿಮೆ ಅವೆಲ್ಲವನ್ನೂ ತನ್ನ ಜೀವನದಲ್ಲಿ ಅಳವಡಿಸಿಕೊಂಡನು. ಶ್ರೀರಾಮಕೃಷ್ಣರನ್ನು ಭೇಟಿಮಾಡಿದ ನಾಲ್ಕು ವರ್ಷಗಳಲ್ಲೇ ತೀರಿಹೋಗದಿದ್ದರೆ ಅವನು ಇನ್ನೂ ಉತ್ತಮ ಸ್ಥಿತಿಯನ್ನು ತಲುಪುತ್ತಿದ್ದನೋ ಏನೋ? ಅಂತ್ಯ ಕಾಲದಲ್ಲಿ ಕೇಶವನನ್ನು ಪರಮಹಂಸರ ಕಾಳಿ ಸಂಪೂರ್ಣ ನುಂಗಿಹಾಕಿಬಿಟ್ಟಿದ್ದಳು. ಆತನಲ್ಲಿ ಸಂಪೂರ್ಣ ಬದಲಾವಣೆ ಮೂಡಿತ್ತು! ಮಿತ್ರನಂತೆ ಬಂದ ಕೇಶವನು ಭಕ್ತನಾಗಿ, ಕೊನೆಗೆ ಶಿಷ್ಯನಾದನು!!

**ಬ್ರಾಹ್ಮಸಮಾಜದ ಮೇಲೆ ಶ್ರೀರಾಮಕೃಷ್ಣರ ಪ್ರಭಾವ:** ಶ್ರೀರಾಮಕೃಷ್ಣರ ಸಂಸರ್ಗದಿಂದ ಕೇಶವನ ಬ್ರಾಹ್ಮಸಮಾಜದಲ್ಲಿ ನೂತನ ಚೈತನ್ಯ ಸಂಚಾರವಾಯಿತು. ಮೂರ್ತಿಪೂಜೆಯನ್ನೇ ನಿಷೇಧಗೊಳಿಸಿದ ಬ್ರಾಹ್ಮಸಮಾಜದಲ್ಲಿ ಈಗ ದೇವರನ್ನು 'ತಾಯಿ' ಎಂಬ ಮಧುರ ನಾಮದಿಂದ ಕರೆಯುವ, ಪೂಜಿಸುವ, ಆರಾಧಿಸುವ ಪದ್ಧತಿ ಜಾರಿಗೆ ಬಂದಿತು! ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ಒಳಗಾಗಿ ಹಿಂದೂ ಧರ್ಮದ ತತ್ತ್ವಗಳನ್ನು ಅಲ್ಲಗಳೆದು ದೂರಸರಿದ ಸದಸ್ಯರಿಗೆ ಈಗ ದೇವರ ಸಾಕ್ಷಾತ್ಕಾರವೇ ಮಾನವನ ಗುರಿ ಹಾಗೂ ಶ್ರೀರಾಮಕೃಷ್ಣರ ಜೀವನದಿಂದ ಬಹಳಷ್ಟು ಕಲಿಯುವುದಿದೆ ಎಂದು ಮನವರಿಕೆಯಾಯಿತು.

ಬ್ರಾಹ್ಮಸಮಾಜಿಗಳು ಅವತಾರವಾದಕ್ಕೆ ವಿರೋಧಿಗಳಾಗಿದ್ದರು. ಅನಂತನೂ, ನಿರಾಕಾರನೂ ಆದ ಬ್ರಹ್ಮನು

ಸಾಂತನೂ, ಸಾಕಾರನೂ ಹೇಗಾದಾನು? ಭಗವಂತನ ಸರ್ವ ಶಕ್ತಿಯಲ್ಲಿ ನಂಬಿಕೆಯಿದ್ದರೂ, ಮನುಷ್ಯ ಶರೀರಧಾರಣೆ ಮಾಡಿ ಭೂಮಿಗೆ ಬರುವಷ್ಟು ಅವನು ಶಕ್ತನಾಗಿರಲಿಲ್ಲ! ಸರ್ವವ್ಯಾಪಿ ಯಾವರೂ ಮೂರ್ತಿಗಳಲ್ಲಿ ಇರುತ್ತಿರಲಿಲ್ಲ! ಯಾರ ಅಭಿಪ್ರಾಯಕ್ಕೂ ಧಕ್ಕೆ ಉಂಟುಮಾಡದೆ, ವಿರೋಧಿಸದೆ, ಅವರವರನ್ನು ಅವರವರ ಭಾವದಿಂದಲೆ ಮೇಲೆತ್ತುವುದರಲ್ಲಿ ಪರಮಹಂಸರು ನಿಸ್ಸೀಮರಾಗಿದ್ದರು. "ನಾನು ಗಂಗೆಯಲ್ಲಿ ಸ್ನಾನ ಮಾಡಬೇಕಾದರೆ ಹರಿದ್ವಾರದಿಂದ ಸಾಗರದ್ವೀಪದವರೆಗೂ ಮುಳುಗಿ ಮೀಯಬೇಕೆ?" ಎನ್ನುತ್ತಾ ಕ್ರಮೇಣ ಅವರ ಭಾವವನ್ನು ಬದಲಾಯಿಸಿದರು. ನಂತರ ಅವತಾರದಲ್ಲಿ ನಂಬಿಕೆಯಿಲ್ಲದ ಬ್ರಾಹ್ಮಸಮಾಜಿಗಳೇ ಪರಮಹಂಸರ ಮಹಿಮೆಯನ್ನು ಜಗತ್ತಿಗೆ ಸಾರುವುದರಲ್ಲಿ ಮೊದಲಿಗರಾದರು!!

ಬ್ರಾಹ್ಮಸಮಾಜಿಗಳು ಕೇವಲ ಶ್ರೀರಾಮಕೃಷ್ಣರ ಭಕ್ತರಾಗುವುವರ ಜೊತೆಗೆ, ಅವರ ತತ್ತ್ವಪ್ರಚಾರಕ್ಕೆ ಸಹಾಯಕರೂ, ಸಂವಾಹಕರೂ ಆದರು. ಈ ದೇವಮಾನವನ ಸಂಗದಿಂದ ಅವರುಗಳಲ್ಲಿ ಹುದುಗಿದ್ದ ಆಧ್ಯಾತ್ಮಿಕ ಪಿಪಾಸೆ ಜಾಗೃತವಾಯಿತು. ಅವರೆಲ್ಲರೂ ತೀವ್ರ ಸಾಧನೆಯಲ್ಲಿ ತೊಡಗಿದರು. ಅವರ ಉತ್ಸಾಹವನ್ನು ಕಂಡು ಉತ್ತೇಜಿತರಾದ ಪರಮಹಂಸರೂ ಕೂಡ ಅವರುಗಳ ಆಧ್ಯಾತ್ಮಿಕ ಉನ್ನತಿಗಾಗಿ ಬಹುವಾಗಿ ಶ್ರಮಿಸಿದರು. ಬ್ರಾಹ್ಮಸಮಾಜದ ಮೇಲೆ ಶ್ರೀರಾಮಕೃಷ್ಣರ ಪ್ರಭಾವ ಅದೆಷ್ಟು ಗಾಢವಾಗಿತ್ತು ಎನ್ನುವುದನ್ನು ಪ್ರತಾಪ ಚಂದ್ರನ ಮಾತಿನಲ್ಲಿ ಕಾಣಬಹುದು. ರಾಮಕೃಷ್ಣರ ಪ್ರಭಾವದಿಂದ ಬ್ರಾಹ್ಮಸಮಾಜದ ಆಧ್ಯಾತ್ಮಿಕ ಗುರಿ ಹಾಗೂ ಅನ್ವೇಷಣೆಗಳ ಮೇಲಾದ ಪರಿಣಾಮವನ್ನು ಕುರಿತು ಒಮ್ಮೆ ಪ್ರತಾಪಚಂದ್ರ ಮಜುಮದಾರನನ್ನು ಪ್ರಶ್ನಿಸಿದಾಗ ಆತನು, "ಅವರ ದರ್ಶನವಾಗುವ ಮೊದಲು ಧರ್ಮವೆಂದರೇನು ಎಂಬುದು ನಮಗೇನಾದರೂ ತಿಳಿದಿತ್ತೆ? ನಾವು ಕೇವಲ ಬಾಯಿಬಡುಕರಾಗಿದ್ದೆವು. ಅವರನ್ನು ನೋಡಿದ ನಂತರವೇ ನಿಜವಾದ ಧರ್ಮ, ಆಧ್ಯಾತ್ಮಿಕತೆಗಳ ಅರ್ಥವನ್ನು ತಿಳಿದೆವು" ಎಂದನು!

**ಬ್ರಾಹ್ಮಸಮಾಜದ ಇತರ ಅನುಯಾಯಿಗಳ ಮೇಲೆ ಶ್ರೀರಾಮಕೃಷ್ಣರ ಪ್ರಭಾವ:** ಕೇಶವನೇ ರಾಮಕೃಷ್ಣರ ಭಕ್ತನೂ, ಶಿಷ್ಯನೂ ಆದದ್ದನ್ನು ಕಂಡ ಬ್ರಾಹ್ಮಸಮಾಜಿಗಳು ತಮ್ಮ ನಾಯಕನನ್ನು ಅನುಸರಿಸಿದರು. ಇತರ ಸದಸ್ಯರು ಪರಮಹಂಸರ ಸಂಪರ್ಕದಿಂದ ಕೃತಕೃತ್ಯರಾದರು. ಅವರಲ್ಲಿ ಮುಖ್ಯರಾದವರೆಂದರೆ—ಪ್ರತಾಪ ಚಂದ್ರ ಮಜುಮದಾರ, ವಿಜಯಕೃಷ್ಣ ಗೋಸ್ವಾಮಿ, ಪಂಡಿತ ಶಿವನಾಥ ಶಾಸ್ತ್ರಿ, ತ್ರೈಲೋಕ್ಯನಾಥ ಸನ್ಯಾಲ, ಗಿರೀಶಚಂದ್ರ ಸೇನ್ ಮುಂತಾದವರು.

ಪ್ರತಾಪಚಂದ್ರ ಮಜುಮದಾರನು ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಓದಿ, ಪ್ರಖ್ಯಾತ ಬರಹಗಾರನೂ, ವಾಗ್ಮಿಯೂ ಆಗಿದ್ದನು. ಕ್ರಿ.ಶ. ೧೮೯೩ರ ಚಿಕಾಗೋ ಸರ್ವಧರ್ಮ ಸಮ್ಮೇಳನದಲ್ಲಿ ಬ್ರಾಹ್ಮಸಮಾಜವನ್ನು ಪ್ರತಿನಿಧಿಸಿದ್ದನು. ತನ್ನ ಮೇಲೆ ಶ್ರೀರಾಮಕೃಷ್ಣರ ಪ್ರಭಾವ ಹೇಗಾಯಿತೆಂಬುದನ್ನು ಆತನ ಮಾತಿನಲ್ಲೇ ಕೇಳೋಣ: "ಆ ದೇವಮಾನವನು ಎಲ್ಲಿ ಹೋದರೂ, ಹೇಗಿದ್ದರೂ ತನ್ನ ಸುತ್ತಲೂ ಚಿಮ್ಮಿಸುತ್ತಿದ್ದ ಆ ಅವರ್ಣನೀಯ ಆನಂದ ಮತ್ತು ಶಾಂತಿಯಲ್ಲೇ ನನ್ನ ಮನಸ್ಸು ಇನ್ನೂ ತೇಲುತ್ತಿದೆ. ನಮ್ಮಿಬ್ಬರ ನಡುವೆ ಏನು ಸಾಮ್ಯವಿದೆ? ವಿದ್ಯಾವಂತನೂ, ಸಂಶಯವಾದಿಯೂ, ನಗರವಾಸಿಯೂ, ಸ್ವಾರ್ಥಿಯೂ ಆದ ನಾನೆಲ್ಲಿ? ಅನಕ್ಷರಸ್ಥರೂ, ಬಡವರೂ, ಗ್ರಾಮ್ಯಭಾಷೆಯನ್ನೇ ಮಾತನಾಡುವವರೂ, ಜನಸಂಪರ್ಕವಿಲ್ಲದವರೂ ಆದ ಅವರೆಲ್ಲಿ? ಮ್ಯಾಕ್ಸ್ ಮುಲ್ಲರ್ ಮುಂತಾದ ಯುರೋಪಿನ ಮಹಾಪಂಡಿತರ ಉಪನ್ಯಾಸಗಳನ್ನು ಕೇಳಿದ ನಾನು ಇವರ ಪದತಲದಲ್ಲಿ ಗಂಟೆಗಟ್ಟಲೆ ಕುಳಿತು ಆಲಿಸುವುದೆಂದರೇನು?" ಶ್ರೀರಾಮಕೃಷ್ಣರಿಗೆ ಸಂಬಂಧಿಸಿದ ತನ್ನ ಅನುಭವಗಳನ್ನು ಭಾವಪೂರ್ಣವಾದ ಭಾಷೆಯಲ್ಲಿ ಲೇಖನವಾಗಿ ಬರೆದು ಇಂಗ್ಲಿಷ್ ಮಾಸಪತ್ರಿಕೆಯೊಂದರಲ್ಲಿ ಪ್ರಕಟಿಸಿದ್ದಲ್ಲದೆ ***Oriental Christ*** 'ಪೌರ್ವಾತ್ಯರ ಕ್ರಿಸ್ತ' ಹಾಗೂ 'ಪರಮಹಂಸ ರಾಮಕೃಷ್ಣ' ಎಂಬ ಜೀವನಚಿತ್ರಗಳನ್ನು ಇಂಗ್ಲಿಷ್‌ನಲ್ಲಿ ಪ್ರಕಟಿಸಿದನು. ಈ ಪುಸ್ತಕಗಳು ಪ್ರಸಿದ್ಧಿ ಪಡೆದು ಹೆಚ್ಚು ಜನ ವಿದ್ಯಾವಂತರು ಶ್ರೀರಾಮಕೃಷ್ಣರ ಬಗ್ಗೆ ತಿಳಿಯಲು ನೆರವಾದವು.

ವಿಜಯಕೃಷ್ಣ ಗೋಸ್ವಾಮಿಯು ಕೇಶವನ ಅನುಯಾಯಿಯಾದರೂ ಆತನೊಡನೆ ಭಿನ್ನಾಭಿಪ್ರಾಯ ಉಂಟಾಗಿ ತಾನೇ ಬೇರೊಂದು ಬ್ರಾಹ್ಮಸಮಾಜವನ್ನು ಸ್ಥಾಪಿಸಿ ಅದರ ಅಧ್ಯಕ್ಷನಾದನು. ಪರಮಹಂಸರ ಸಂಪರ್ಕದಿಂದ ಆತನಲ್ಲಿ ಅದೆಂತಹ ಆಧ್ಯಾತ್ಮಿಕ ಅಭೀಪ್ಸೆ ಮೂಡಿತೆಂದರೆ ಆತ ಬ್ರಾಹ್ಮಸಮಾಜಕ್ಕೆ ರಾಜೀನಾಮೆ ನೀಡಿ ಸ್ವತಂತ್ರವಾಗಿ ಆಧ್ಯಾತ್ಮಿಕ ಸಾಧನೆಯಲ್ಲಿ ತೊಡಗಿದನು. ಕಾವಿ ಬಣ್ಣವು ವೈರಾಗ್ಯದ ದ್ಯೋತಕ. ಆತನ ವೈರಾಗ್ಯ ಎಂತಹ ಪರಾಕಾಷ್ಠೆಗೆ ತಲುಪಿತೆಂದರೆ ಕೇವಲ ಕಾಷಾಯವಸ್ತ್ರಗಳನ್ನು ಧರಿಸುವುದಲ್ಲದೆ, ಪಾದರಕ್ಷೆಗಳಿಗೂ ಕಾವಿ ಬಣ್ಣ ಹಾಕಿಕೊಳ್ಳತೊಡಗಿದನಂತೆ! ಕಾವಿಬಣ್ಣ ಬಿಟ್ಟರೆ ಬೇರಾವ ಬಣ್ಣವೂ ಆತನಿಗೆ ಹಿಡಿಯುತ್ತಿರಲಿಲ್ಲವಂತೆ. ಅನೇಕ ಆಧ್ಯಾತ್ಮಿಕ ಅನುಭವಗಳನ್ನೂ, ದರ್ಶನಗಳನ್ನೂ ಆತ ಪಡೆದನು. ಆತನ ಆಧ್ಯಾತ್ಮಿಕ ಪ್ರಗತಿಯ ಬಗ್ಗೆ ಪರಮಹಂಸರೇ "ಅಂತರಂಗದ ಕೋಣೆಯ ಬದಿಯಲ್ಲೇ ಇರುವ ಸ್ಥಳಕ್ಕೆ ವಿಜಯ್ ಆಗಲೇ ತಲುಪಿದ್ದಾನೆ. ಅತ್ಯಂತ ಉನ್ನತ ಆಧ್ಯಾತ್ಮಿಕ ಸಾಕ್ಷಾತ್ಕಾರದ ಕದವನ್ನೇ ತಟ್ಟುತ್ತಿದ್ದಾನೆ" ಎನ್ನುತ್ತಿದ್ದರು! ಜನರೂ ಆತನ ಪ್ರಗತಿಯನ್ನು ಕಂಡು ಆಶ್ಚರ್ಯದಿಂದ ತಲೆದೂಗುತ್ತಿದ್ದರು. ಶ್ರೀರಾಮಕೃಷ್ಣರ ಸಮಾಧಿಯ ನಂತರ ೧೨ ವರ್ಷಗಳು ಜೀವಿಸಿದ್ದು ಕೊನೆಗೆ ಇವನು ಪುರಿಯಲ್ಲಿ ದೇಹತ್ಯಾಗ ಮಾಡಿದನು.

ವಿಜಯಕೃಷ್ಣ ಗೋಸ್ವಾಮಿಯು ಬ್ರಾಹ್ಮಸಮಾಜದ ಅಧ್ಯಕ್ಷಪದವಿಗೆ ರಾಜೀನಾಮೆ ನೀಡಿದ ನಂತರ ಶಿವನಾಥಶಾಸ್ತ್ರಿ ಆ

ಸ್ಥಾನಕ್ಕೇರಿದನು. ಪಾಶ್ಚಾತ್ಯ ವಿದ್ಯೆ, ಸಂಸ್ಕೃತಿಗಳಿಂದ ಪ್ರಭಾವಿತನಾಗಿ ಆತ ಅರ್ಧಸಂದೇಹವಾದಿಯಾಗಿದ್ದನು. ಈಶ್ವರ ಸಾಕ್ಷಾತ್ಕಾರಕ್ಕೆ ವೈರಾಗ್ಯ ಅನಾವಶ್ಯಕ ಎಂದು ಭಾವಿಸಿದ್ದನು. ಶ್ರೀರಾಮಕೃಷ್ಣರ ಭಾವಸಮಾಧಿ ಎಂಬುದು ಒಂದು ವಿಧವಾದ ಮೂರ್ಛೆ, ನರಗಳ ಜಾಡ್ಯ ಎಂದೆಲ್ಲ ಆಡಿಕೊಳ್ಳುತ್ತಿದ್ದ ಅವನ ಮೇಲೆ ಶ್ರೀರಾಮಕೃಷ್ಣರ ಪ್ರಭಾವವನ್ನು ತಿಳಿಯಲು ಆತ ಪರಮಹಂಸರನ್ನು ಕುರಿತು ಮುಂದೊಮ್ಮೆ ಹೇಳಿದ ಈ ಮಾತುಗಳನ್ನು ಗಮನಿಸಬೇಕು: "ಅಂತಹ ಬೇರೊಬ್ಬ ವ್ಯಕ್ತಿಯನ್ನು ನಾನು ಮತ್ತೆಲ್ಲಿಯೂ ಕಂಡಿಲ್ಲ. ಆತನ ಈಶ್ವರ ದರ್ಶನಾಕಾಂಕ್ಷೆ ನಿರುಪಮವಾದುದು. ದೇವರಿಗಾಗಿ ಆತನು ತಪಸ್ಸು ಮಾಡಿದಂತೆ ಇತರರಿಗೆ ಮಾಡುವುದು ಅಸಾಧ್ಯ. ಆತನು ಸಿದ್ಧಪುರುಷ. ಆತನ ಸಾನ್ನಿಧ್ಯದಲ್ಲಿ ನನಗೆ ಧರ್ಮ ಜ್ಯೋತಿ ಲಭಿಸಿತು. ನಾನು ಆತನಿಗೆ ಚಿರಋಣಿ. ನನ್ನ ಜೀವಮಾನದಲ್ಲಿ ನನಗೆ ಅಂತಹ ಮತ್ತೊಬ್ಬ ದೇವಮಾನವನ ದರ್ಶನವಾಗಿಲ್ಲ ಎಂದು ಮುಕ್ತಕಂಠದಿಂದ ಸಾರುತ್ತೇನೆ."

ತ್ರೈಲೋಕ್ಯನಾಥ ಸನ್ಯಾಲನು (ಚಿರಂಜೀವಿ ಶರ್ಮ) ಬ್ರಾಹ್ಮ ಸಮಾಜದ ಗಾಯಕ ಕವಿ. ಆತನಿಗೆ ಸುಮಧುರ ಕಂಠವಿತ್ತು. ಇತರ ಬ್ರಾಹ್ಮಸಮಾಜಿಗಳಂತೆ ಆತನೂ ವೈರಾಗ್ಯದ್ವೇಷಿಯೂ, ಅವತಾರಗಳಲ್ಲಿ ನಂಬುಗೆ ಇಲ್ಲದವನೂ ಆಗಿದ್ದನು. ಆದರೆ ಪರಮಹಂಸರ ಸಂಪರ್ಕಕ್ಕೆ ಬಂದ ಬಳಿಕ ಆತನ ಆಧ್ಯಾತ್ಮಿಕ ಜೀವನ ಸಂಪೂರ್ಣವಾಗಿ ಬದಲಾಯಿತು. ಪರಮಹಂಸರ ಭಕ್ತಿ, ಸಮಾಧಿ, ದರ್ಶನಗಳಿಂದ ಪ್ರೇರಿತನಾಗಿ ಅನೇಕ ಭಾವಪೂರ್ಣ ಗೀತೆಗಳನ್ನು ರಚಿಸಿದನು. ಎಷ್ಟೋ ಬಾರಿ ರಾಮಕೃಷ್ಣರು ಆತನ ಗಾಯನ ಕೇಳಿ ಸಮಾಧಿಸ್ಥರಾಗುತ್ತಿದ್ದರು. ಹೃನ್ಮನಗಳಿಗೆ ಆನಂದವನ್ನೀಯುವ ಆತನ ಕೀರ್ತನೆಗಳಿಗೆ ಭಕ್ತರೆಲ್ಲರೂ ಚಿರಋಣಿಯಾಗಿರಬೇಕು.

ಗಿರೀಶ್‌ಚಂದ್ರ ಸೇನನು ಪ್ರಖ್ಯಾತ ಬರಹಗಾರನೂ ಬ್ರಾಹ್ಮ ಸಮಾಜದ ಪತ್ರಿಕೆಗಳ ಮುಖ್ಯ ಸಂಪಾದಕನೂ ಆಗಿದ್ದನು. ಈತ ಕ್ರಿ.ಶ. ೧೮೭೮ರಲ್ಲಿ ಶ್ರೀರಾಮಕೃಷ್ಣರ ೧೮೪ ಉಪದೇಶಗಳನ್ನು ಆಯ್ದು "ಶ್ರೀರಾಮಕೃಷ್ಣ ಪರಮಹಂಸೇರ್ ಉಕ್ತಿ" ಎಂಬ ಪುಸ್ತಕರೂಪದಲ್ಲಿ ಪ್ರಕಟಿಸಿದನು. ಅವರ ಜೀವನ ವೃತ್ತಾಂತವನ್ನು ಕುರಿತು 'ಸಂಕ್ಷಿಪ್ತ ಜೀವನ' ಎಂಬುದನ್ನೂ ಪ್ರಕಟಿಸಿದನು.

**ಶ್ರೀರಾಮಕೃಷ್ಣರ ಮೇಲೆ ಬ್ರಾಹ್ಮಸಮಾಜದ ಪ್ರಭಾವ:** ರಾಮಕೃಷ್ಣರಂಥ ಅವತಾರಶ್ರೇಷ್ಠರಿಗೆ ಬ್ರಾಹ್ಮಸಮಾಜದಿಂದ ಏನು ಉಪಯೋಗವಾಗಲು ಸಾಧ್ಯ ಎಂದು ನಮಗೆ ಅನಿಸಬಹುದು. ಆದರೆ "ಬದುಕಿರುವವರೆಗೂ ನಾನು ಕಲಿಯುತ್ತಲೇ ಇರುತ್ತೇನೆ" ಎನ್ನುತ್ತಿದ್ದ ಶ್ರೀರಾಮಕೃಷ್ಣರು ಈ ಪ್ರಪಂಚದ ವಿದ್ಯಮಾನಗಳು ನೀಡುವ ಎಲ್ಲ ತಿಳಿವಿಗೂ ತಮ್ಮ ಮನಸ್ಸನ್ನು ಮುಕ್ತವಾಗಿ ತೆರೆದುಕೊಂಡಿದ್ದರು. ಹಳ್ಳಿಯಲ್ಲಿ ಹುಟ್ಟಿ, ಬೆಳೆದು, ಸಾಧನೆ-ತಪಸ್ಸುಗಳಲ್ಲಿ ಕಾಲ ಕಳೆದು ಆಧುನಿಕ ವಿದ್ಯಾಭ್ಯಾಸದ ಗಂಧವೇ ಇಲ್ಲದಿದ್ದ ಅವರಿಗೆ, ಮೊದಮೊದಲಿಗೆ ಪಾಶ್ಚಾತ್ಯ ವಿದ್ಯೆ ಹಾಗು ಸಂಸ್ಕೃತಿಗಳ ಪ್ರಭಾವಕ್ಕೆ ಒಳಗಾದವರ ಮಾನಸಿಕ ತುಮುಲಗಳ ಅರಿವಿರಲಿಲ್ಲ. ತಮ್ಮ ಸಂಪರ್ಕಕ್ಕೆ ಬಂದಿದ್ದ ಮಥುರನಾಥನಾದರೋ ಬಹು ಬೇಗ ಭಕ್ತನಾಗಿ ಪರಿವರ್ತಿತನಾದ್ದರಿಂದ ಶ್ರದ್ಧೆಯ ಅವನತಿಯ ಪರಿಚಯವಾಗಲು ಹೆಚ್ಚು ಅವಕಾಶವಿರಲಿಲ್ಲ. ಆಧುನಿಕ ಶಿಕ್ಷಣ ಪಡೆದ ಬ್ರಾಹ್ಮಸಮಾಜದ ಅನುಯಾಯಿಗಳು ಇಂಥದೊಂದು ಅವಕಾಶವನ್ನು ಕಲ್ಪಿಸಿಕೊಟ್ಟದ್ದಂತೂ ನಿಜ.

ಕೇಶವನು ರಾಮಕೃಷ್ಣರಿಂದ ಪ್ರಭಾವಿತನಾದಂತೆ, ರಾಮಕೃಷ್ಣರೂ ಕೇಶವನೆಡೆಗೆ ಆಕರ್ಷಿತರಾದರು. ಬ್ರಾಹ್ಮಸಮಾಜದ ಬಗ್ಗೆ ತಿಳಿಯುವುದಕ್ಕಿಂತ ಮುಂಚೆಯೇ ಒಮ್ಮೆ ಅಲ್ಲಿಗೆ ಭೇಟಿಯಿತ್ತಿದ್ದಾಗ, ವೇದಿಕೆಯ ಮೇಲೆ ಮೂವರು ವ್ಯಕ್ತಿಗಳು ಧ್ಯಾನಸ್ಥರಾಗಿರುವುದನ್ನು ಕಂಡು, ಆ ಮೂವರಲ್ಲಿ ಕೇಶವನ ಮನಸ್ಸು ಮಾತ್ರ ದೇವರಲ್ಲಿ ನೆಲೆಸಿರುವುದನ್ನು ಗಮನಿಸಿದ್ದರು. ಕೆಲವು ದಿನ ಆತನನ್ನು ಕಾಣದಿದ್ದರೆ ಚಡಪಡಿಸುತ್ತಿದ್ದರು. ಕೇಶವನಿಗೆ ಖಾಯಿಲೆ ಬಂದಾಗ ಅದು ಗುಣವಾಗಲೆಂದು ಹರಕೆ ಹೊತ್ತರು. ಆತನ ಮರಣವಾರ್ತೆಯನ್ನು ಕೇಳಿ ಅತೀವವಾಗಿ ಶೋಕಗೊಂಡು, "ಅಯ್ಯೋ! ಕೇಶವನ ಸಾವಿನಿಂದ ನನ್ನ ಅರ್ಧ ಜೀವವೇ ಹೋದಂತಾಯಿತು. ಸಾವಿರಾರು ಜನರಿಗೆ ನೆರಳ ನೀಡುತ್ತಿದ್ದ ದೊಡ್ಡ ಆಲದ ಮರ ಆತ! ಅಂತಹ ಮತ್ತೊಂದು ಆಶ್ರಯ ಎಲ್ಲಿ ದೊರೆಯುವುದು?" ಎಂದು ವಿಲಾಪಿಸಿದರು. ಕೇಶವನ ಸಂಪರ್ಕದಿಂದ ಸಾಮಾಜಿಕ ಜೀವನದ ರೀತಿಗಳ ಹಾಗೂ ಶಿಷ್ಟಾಚಾರಗಳ ಆವಶ್ಯಕತೆಯ ಬಗ್ಗೆ ಅವರು ತಮ್ಮದೇ ಅಭಿಪ್ರಾಯಗಳನ್ನು ರೂಪಿಸಿಕೊಳ್ಳಲು ನೆರವಾಯಿತು.

ಬ್ರಾಹ್ಮಸಮಾಜದಲ್ಲಿ ಕೆಲವರಾದರೂ ಪ್ರಾಮಾಣಿಕ ಸಾಧಕರು ಹಾಗೂ ಭಕ್ತರು ಇರುವುದು ಶ್ರೀರಾಮಕೃಷ್ಣರ ಗಮನಕ್ಕೆ ಬಂದಿತ್ತು. ಪ್ರಾಮಾಣಿಕ ಸಾಧಕರನ್ನು, ಭಕ್ತರನ್ನು ಕಂಡರೆ ಕರುವಿನ ಬಳಿ ಓಡುವ ಹಸುವಿನಂತೆ ಪರಮಹಂಸರು ಹಾತೊರೆಯುತ್ತಿದ್ದರು. ಅಂತಹವರೊಂದಿಗೆ ತೀರ ಸಲುಗೆಯಿಂದ ವರ್ತಿಸುತ್ತಿದ್ದರು. ಆದರೆ ಬಹಳಷ್ಟು ಬ್ರಾಹ್ಮ ಸಮಾಜಿಗಳಲ್ಲಿ ಪಾಶ್ಚಾತ್ಯ ಸಂಸ್ಕೃತಿಯ ವ್ಯಾಮೋಹ ತೀರಾ ಆಳವಾಗಿ ಬೇರೂರಿರುವುದನ್ನು ಶ್ರೀರಾಮಕೃಷ್ಣರು ಬಹಳ ಬೇಗ ಮನಗಂಡರು. ಶ್ರೀರಾಮಕೃಷ್ಣರು ತಮ್ಮ ಸಮಕಾಲೀನ ಸಾಮಾಜಿಕ ಜೀವನದಲ್ಲಿ ಬ್ರಾಹ್ಮಸಮಾಜದ ಧೋರಣೆಗಳು ಹೇಗೆ ಜನರ ವಿಚಾರಗಳನ್ನು ರೂಪಿಸುತ್ತಿವೆ ಎಂಬುದನ್ನು ಗುರುತಿಸಿದ್ದರಷ್ಟೇ ಅಲ್ಲ, ಅದರಲ್ಲಿನ ಲೋಪದೋಷಗಳನ್ನು ತಿದ್ದುವುದರಲ್ಲಿ ನೆರವಾದರು. ಬ್ರಾಹ್ಮಸಮಾಜದ ಸಾಧಕರಿಗೆ ಆಧ್ಯಾತ್ಮಿಕ ಸಂಸ್ಕಾರವನ್ನು ನೀಡುವುದರ ಮೂಲಕ ಮತ, ಪಂಗಡಗಳ ಸಂಕುಚಿತ ಇತಿಮಿತಿಗಳಿಂದ ಹೊರಬಂದು ಅವರ ಧಾರ್ಮಿಕ ದೃಷ್ಟಿ ವಿಶಾಲವಾಗುವಂತೆ ಮಾಡುವುದರಲ್ಲಿ ಶ್ರೀರಾಮಕೃಷ್ಣರ ಪಾತ್ರ ಅನನ್ಯವಾದುದು. ✪